


ಮೊದಲ ತಂಡದಲ್ಲಿ 8 ಮಂದಿ ಇದ್ದರು. ಈಗ 73 ಮಂದಿ ಇದ್ದಾರೆ. ಈವರೆಗೆ 500ಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದ್ದೇನೆ. 420 ವೆಬಿನಾರ್ ಮಾಡಿಸಿದ್ದೇನೆ; ಒಂದೇ ವರ್ಷದಲ್ಲಿ 2000ಕ್ಕೂ ಅಧಿಕ ಕಾರ್ಯಗಾರ ಮಾಡಿಸಿದ್ದೇನೆ. ಗೃಹಿಣಿಯರು ಮನೆಯಲ್ಲಿ ಬೆಳಗಿನಿಂದ ರಾತ್ರಿ ತನಕ ದುಡಿದರೂ ಮನ್ನಣೆ ಇರುವುದಿಲ್ಲ. ಹಣ ಗಳಿಸುವ ಮಾರ್ಗ ಕಂಡುಕೊಂಡವರು ಆ ಮನಸ್ಥಿತಿಯಿಂದ ಹೊರಬರುತ್ತಾರೆ. ವಿದ್ಯಾರ್ಥಿಗಳಿಗೆ ಕೆಲಸ ಪಡೆಯಲು ಅನುಕೂಲ ಆಗುವಂತೆ ಕೌಶಲ್ಯ ಆಧಾರಿತ ಕೋರ್ಸ್ ರೂಪಿಸಿದ್ದೇವೆ. ಇದು ಪ್ರಾಯೋಗಿಕ ಕೆಲಸ ಆಗಿದ್ದರಿಂದ ಕೆಲಸ ಹುಡುಕುವುದು ಸುಲಭವಾಗುತ್ತಿದೆ. ಮೂರು ತಿಂಗಳ ತರಬೇತಿ ನಂತರ ಸ್ವಾವಲಂಬಿಗಳಾದವರ ಅನೇಕ ಉದಾಹರಣೆಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ನೋಡಬಹುದು.

◆ **ಡಿಜಿಟಲ್ ಮಾರ್ಕೆಟಿಂಗ್ ಅಂದರೆ ಏನು? ಅದನ್ನು ಕಲಿಯುವುದು ಹೇಗೆ?**

ಇದು ಕಲಿಯುವುದು ಎನ್ನುವದಕ್ಕಿಂತ ನಮ್ಮಲ್ಲಿ ಇರುವ ಜ್ಞಾನ–ಕೌಶಲ್ಯವನ್ನು ಸಂಭಾವನೆ ಬರುವಂತೆ ರೂಪಿಸಿಕೊಳ್ಳುವುದು. ಈ ಸಂಬಂಧ ಅನೇಕ ಡಿಜಿಟಲ್ ಮಾರುಕಟ್ಟೆ ಕೋರ್ಸ್ ಇವೆ. ಅದನ್ನು ಅರ್ಥ ಮಾಡಿಕೊಂಡು ಜನ ಹೊಸ ಸಾಧ್ಯತೆ ಬಗ್ಗೆ ಯೋಚಿಸಬೇಕು. ಕರಿಯರ್ ಕಟ್ಟಿಕೊಳ್ಳಲು ಮಾನಸಿಕವಾಗಿ ಸಿದ್ಧರಾಗಿರಬೇಕು ಅಷ್ಟೆ. ತಾನು ಏನು ಮಾಡಬಲ್ಲೆ, ಯಾವ ಕೆಲಸ ತನಗೆ ಖುಷಿ ಕೊಡುತ್ತದೆ ಎನ್ನುವುದನ್ನು ಅರಿಯಬೇಕು. ಅದರ ಶೋಧಕ್ಕೆ ಇಂತಹ ತರಬೇತಿ ನೆರವು ಆಗುತ್ತವೆ.

ಅನೇಕರು ಜಾಬ್ ಚೇಂಜ್ ಮಾಡಲು ಸಂಬಳ ಮತ್ತು ಒತ್ತಡ ಕಾರಣ ಎನ್ನುತ್ತಾರೆ. ಆಸಕ್ತಿ ಇದ್ದರೆ ಆ ಕೆಲಸ ಕಷ್ಟ, ಒತ್ತಡ ಅಂತ ಅನಿಸುವುದಿಲ್ಲ. ಸಂಪಾದನೆಗಾಗಿ ಕೆಲಸ ಮಾಡುವಾಗ ಆಸಕ್ತಿ ಇಲ್ಲದಿದ್ದರೂ ಮಾಡುತ್ತೇವೆ. ಅನ್ನಕ್ಕಾಗಿ ಅದನ್ನು ಅವಲಂಬಿಸುತ್ತೇವೆ. ಆದರೆ ಖುಷಿ ಸಿಗಲ್ಲ. ಡಿಜಿಟಲ್ ಮಾರುಕಟ್ಟೆ ಪ್ರವೇಶ ಮಾಡುವ ಮುನ್ನ ಅವರ ಬಗ್ಗೆ ಅವರಿಗೆ ಮನವರಿಕೆ ಆಗಿರುತ್ತದೆ. ಒಬ್ಬ ಹಳ್ಳಿಯ ಸ್ತ್ರೀ ಕಸೂತಿ, ಮೆಹಂದಿ, ಸಂಗೀತ ಅಥವಾ ಬುಟ್ಟಿ ಹೆಣೆಯುವಂತಹ ಕೆಲಸ ಗೊತ್ತಿದ್ದರೆ ಅದನ್ನು ಮಾರಾಟ ಮಾಡಲು ಸಾಕಷ್ಟು ಅವಕಾಶ ಇವೆ. ಆದರೆ ಅದನ್ನು ಆನ್‌ಲೈನ್‌ಗೆ ಹೇಗೆ ತರಬೇಕು ಎನ್ನುವುದನ್ನು ಕಲಿಯಬೇಕು.

◆ **ವೆಬ್ ಡಿಸೈನಿಂಗ್ ತಾಂತ್ರಿಕ ತರಬೇತಿಯನ್ನು ಜನಸಾಮಾನ್ಯರಿಗೆ ಉಚಿತವಾಗಿ ಆರಂಭಿಸಿದ್ದು ಏಕೆ?**

ಕರಿಯರ್ ಕೌನ್ಸಿಲಿಂಗ್, ಡಿಜಿಟಲ್ ಮಾರ್ಕೆಟಿಂಗ್ ಕಲಿಯಲು ನನ್ನ ಮೇಲೆ ನಾನು 6 ಲಕ್ಷ ರೂಪಾಯಿ ಹೂಡಿಕೆ ಮಾಡಿದ್ದೇನೆ. ಎಷ್ಟೋ ಜನರಿಗೆ ಕಲಿಯುವ ಆಸೆ ಇರುತ್ತದೆ. ಹಣ ಇರುವುದಿಲ್ಲ. ಉಚಿತ ಆದರೆ ಧೈರ್ಯ ಮಾಡಬಹುದು ಎನ್ನುವವರು ಒಬ್ಬರಿಗೆ ಒಬ್ಬರು ಪೂರಕವಾಗಿ ಈ ಉದ್ಯಮದಲ್ಲಿ ಬೆಳೆಯಬಹುದು. ಆದರೆ ಎಚ್ಚರ ಇರಬೇಕು. 'ಒಂದೇ ವಾರದಲ್ಲಿ ಹತ್ತು ಸಾವಿರ ಗಳಿಸಿ. ಮನೆಯಿಂದಲೇ ಕೆಲಸ ಮಾಡಿ ಲಕ್ಷ ಸಂಪಾದಿಸಿ' ಎನ್ನುವ ಜಾಹೀರಾತುಗಳ ಮೋಡಿಗೆ ಒಳಗಾಗಬಾರದು. ಚೈನ್ ಲಿಂಕ್ ಬಿಜಿನೆಸ್ ಕೂಡ ಇರುತ್ತವೆ. ಕೆಲವು ಕಡೆ 10 ರೂಪಾಯಿ ಮೌಲ್ಯದ ವಸ್ತುವನ್ನು ನೂರಾರು ರೂಪಾಯಿಗೆ ಮಾರಬೇಕಾಗುತ್ತದೆ. ಅದೆಲ್ಲ ಮೋಸ ಅನಿಸುತ್ತದೆ. ಯಾವುದೇ ವಸ್ತು ಮಾರಾಟ ಮಾಡುವ ಬದಲು ನಮ್ಮ ಜ್ಞಾನವನ್ನು ಹೂಡಿಕೆ ಮಾಡುವ ತಾಂತ್ರಿಕ ಕೌಶಲ್ಯವನ್ನು ಅರ್ಥ ಮಾಡಿಸುವುದು ನಮ್ಮ ಉದ್ದೇಶ. ಅದಕ್ಕೆ ವೆಬ್‌ಸೈಟ್ ಅವಶ್ಯ. ಅದನ್ನು ಉಚಿತವಾಗಿ ಐದು ದಿನದ (ಹತ್ತು ಗಂಟೆ) ವೆಬ್ ಡಿಸೈನಿಂಗ್ ತರಗತಿಯಲ್ಲಿ ಕಲಿಸುತ್ತೇವೆ. ಡಿಜಿಟಲ್ ಮಾರ್ಕೆಟ್‌ನ ಮೊದಲ ಹಂತ ಇದು. ನಮ್ಮ ಮೊದಲ ಬ್ಯಾಚಿಗೆ 120 ಮಂದಿ ಪ್ರವೇಶ ಪಡೆದರು. ಅದರಲ್ಲಿ 93 ಮಂದಿ ಸಕ್ರಿಯರಾಗಿದ್ದರು. ಅದರಲ್ಲಿ ಕೇವಲ 6 ಮಂದಿ ಮಾತ್ರ ಪ್ರಯೋಜನ ಪಡೆದರು. ಅದರಿಂದ, ಫ್ರೀ ಎಂದರೆ ಟೈಮ್‌ಪಾಸ್ ಮಾಡುವವರು ಹೆಚ್ಚು ಜನ ಬರ್ತಾರೆ ಎನ್ನುವುದು ಗೊತ್ತಾಯಿತು. ಅದಾದ ಮೇಲೆ, 599 ರೂಪಾಯಿ ಸಾಂಕೇತಿಕ ಶುಲ್ಕ ಗೊತ್ತುಪಡಿಸಿದ್ದೇವೆ. ತರಬೇತಿ ನಂತರ ಅವರು ಕಲಿತರೆ ಅವರ ಆ ಹಣವನ್ನು ಮರಳಿಸುತ್ತೇವೆ. ಅಷ್ಟರಲ್ಲಿ ಅವರ ವೆಬ್‌ಸೈಟ್ ಅವರು ಉಚಿತವಾಗಿ ಮಾಡಿಕೊಳ್ಳುತ್ತಾರೆ. ವೈಬ್‌ಸೈಟ್ ವಿನ್ಯಾಸ ಸಂಬಂಧಿ ಕೆಲಸಗಳು ಅವರಿಗೆ ಸಿಕ್ಕರೆ, ಅದನ್ನು ರೂಪಿಸಿ ಶುಲ್ಕ ನಿಗದಿ ಮಾಡುವುದನ್ನು ಕಲಿಸುವ ಜೊತೆಗೆ ಶೇ 50ರಷ್ಟು ಸಂಪನ್ಮೂಲವನ್ನೂ ಕೊಡುತ್ತೇವೆ.

◆ **ಇರುವ ಕೆಲಸವನ್ನು ಬಿಟ್ಟು ಹೇಗೆ ಬರುವುದು?**

ಡಿಜಿಟಲ್ ಮಾರುಕಟ್ಟೆ ಎನ್ನುವುದು ಕೆಲಸ ಅಲ್ಲ, ಇಲ್ಲಿ ನಮಗೇ ನಾವೇ ಟೂಲ್ ಆಗುವುದು. ಇಲ್ಲಿ ನಮ್ಮ ಅನುಭವ–ಕೌಶಲ್ಯವನ್ನು ಮಾರಾಟ ಮಾಡುತ್ತೇವೆ. ನಮ್ಮ ನಮ್ಮ ಕೆಲಸದಲ್ಲಿ ಗಳಿಸಿದ ಪ್ರಾವೀಣ್ಯತೆಯನ್ನೂ ಉದ್ಯಮಕ್ಕೆ ವಿನಿಯೋಗಿಸಬಹುದು. ನಮಗೆ ಏನು ಇಷ್ಟವೋ ಅದನ್ನೇ ಹಣಮಾಡುವಂತೆ ತೊಡಗಿಸಬೇಕು. ಅದಕ್ಕೆ ಸಾಮಾಜಿಕ ಮಾಧ್ಯಮಗಳಾದ ಯುಟ್ಯೂಬ್, ಗೂಗಲ್‌ಗಳನ್ನು ಟೂಲ್ ಮಾಡಿಕೊಳ್ಳಬೇಕು. ನಮ್ಮ ತಿಳಿವಳಿಕೆಯನ್ನು ಜನರ ಮುಂದೆ ಹೇಗೆ ಇಡಬೇಕು ಎನ್ನುವುದನ್ನು ಕಲಿಯಬೇಕು. ಕಲಿಕೆಯ ಪ್ರಯತ್ನದಲ್ಲಿಯೇ ಸಾಕಷ್ಟು ಅವಕಾಶ ಪಡೆಯಬಹುದು. ನೌಕರಿ ಎಂದು ಮಾಡುವಾಗ ಸಂಜೆ 5ಕ್ಕೆ ಕಾಯುತ್ತಿದ್ದೆ. ಅಷ್ಟರಲ್ಲಿ ದಣಿವಾಗುತ್ತಿತ್ತು. ಈಗ ರಾತ್ರಿ 12 ಆದರೂ ಸುಸ್ತಾಗುವುದಿಲ್ಲ. ಅದಕ್ಕೆ ಕಾರಣ, ನನ್ನ ಆಸಕ್ತಿಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವುದು. ನಮ್ಮ ಇಷ್ಟದ ಕೆಲಸವನ್ನು ನಮ್ಮಷ್ಟು ಬೇರೆ ಯಾರೂ ಚೆಂದ ಮಾಡುವುದಿಲ್ಲ. ಆ ಭರವಸೆಯಲ್ಲಿ ತೊಡಗಬೇಕು ಕ್ರಿಯಾಶೀಲತೆ ಒಂದೆ ಯಶಸ್ಸಿನ ಮಂತ್ರ.

**ವೀರೇಶ್‌ರ ಸಂಪರ್ಕ:**
**youtube.com/watch?v=DdUFzLmkhg**
**ಫೋನ್: 7022661441/9686138618**